5

# ಸತ್ಯವಂತ ಮತ್ತು ಸುಳ್ಳುಗಾರ


مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಸತ್ಯವಂತ ಎಂದರೆ ಸತ್ಯವನ್ನೇ ನುಡಿಯುವವನು ಮತ್ತು ವಾಸ್ತವಾಂಶಗಳ ಬಗ್ಗೆ ಮಾತ್ರ ಮಾತನಾಡುವವನು. ಸತ್ಯವಂತನಾಗುವುದು ಮಾನವ ಸಮಾಜದ ಅನಿವಾರ್ಯ ಘಟಕಗಳಲ್ಲೊಂದು. ಅದು ಮಾನವ ಸ್ವಭಾವದ ಉತ್ಕೃಷ್ಟ ಗುಣವಾಗಿದ್ದು ಒಳಿತನ್ನಲ್ಲದೆ ಇನ್ನೇನನ್ನೂ ತರುವುದಿಲ್ಲ. ಆದರೆ ಸುಳ್ಳು ಮಾನವ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಭ್ರಷ್ಟತೆಗಳಲ್ಲೇ ಅತಿಪ್ರಮುಖ ಸ್ಥಾನದಲ್ಲಿದೆ. ಅದು ಸಾಮಾಜಿಕ ನೆಲೆಗಟ್ಟು ಮತ್ತು ಸಾಮಾಜಿಕ ಸಂಬಂಧಗಳು ಶಿಥಿಲವಾಗಲು ಕಾರಣವಾಗುತ್ತದೆ. ಅದು ಮಾನವ ಸ್ವಭಾವದ ಅತಿಕೆಟ್ಟ ಲಕ್ಷಣವಾಗಿದ್ದು ವ್ಯಾಪಕ ನೆಲೆಯಲ್ಲಿ ಹಾನಿಗಳನ್ನು ಉಂಟುಮಾಡುತ್ತದೆ. ಇಸ್ಲಾಮ್ ಸತ್ಯಸಂಧನಾಗಲು ಆದೇಶಿಸುತ್ತದೆ ಮತ್ತು ಸುಳ್ಳು ಹೇಳುವುದನ್ನು ವಿರೋಧಿಸುತ್ತದೆ.

ಅಲ್ಲಾಹು ಹೇಳುತ್ತಾನೆ: “ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನನ್ನು ಭಯಪಟ್ಟು ಜೀವಿಸಿರಿ ಮತ್ತು ಸತ್ಯವಂತ-

ರೊಂದಿಗೆ ಸೇರಿಕೊಳ್ಳಿರಿ." (ಕುರ್‌ಆನ್ 9:119)

ಇಬ್ನ್ ಕಸೀರ್ ಹೇಳುತ್ತಾರೆ: "ಅಂದರೆ ಸತ್ಯವನ್ನೇ ನುಡಿಯಿರಿ ಮತ್ತು ಸತ್ಯಸಂಧತೆಗೆ ಅಂಟಿಕೊಳ್ಳಿರಿ. ಆಗ ನೀವು ಅದರ ಜನರೊಂದಿಗೆ ಸೇರಿಕೊಳ್ಳುವಿರಿ ಮತ್ತು ವಿನಾಶಗಳಿಂದ ಪಾರಾಗುವಿರಿ. ಸತ್ಯಸಂಧತೆಯು ನಿಮ್ಮ ಎಲ್ಲ ಸಮಸ್ಯೆಗಳಲ್ಲೂ ನಿಮಗೊಂದು ನಿರ್ಗಮನ ದ್ವಾರ-ವನ್ನು ತೋರಿಸಿಕೊಡುತ್ತದೆ."

ಅಲ್ಲಾಹು ಹೇಳುತ್ತಾನೆ: "ಅವರು ಅಲ್ಲಾಹನೊಂದಿಗೆ ಸತ್ಯವನ್ನು ಹೇಳಿದ್ದರೆ ಅದು ಅವರಿಗೆ ಒಳಿತಾಗಿರುತ್ತಿ-ತ್ತು." (ಕುರ್‌ಆನ್ 47:21)

ಅಬ್ದುಲ್ಲಾಹ್ ಬಿನ್ ಮಸ್‌ಊದ್(ﷺ) ರಿಂದ ವರದಿ: ಪ್ರವಾದಿ ಮುಹಮ್ಮದ್(ﷺ) ರು ಹೇಳುತ್ತಾರೆ: "ನೀವು ಸತ್ಯವನ್ನೇ ನುಡಿಯಿರಿ. ಏಕೆಂದರೆ ಸತ್ಯವು ಒಳ್ಳೆಯತನ-ಕ್ಕೆ ಮತ್ತು ಒಳ್ಳೆಯತನ ಸ್ವರ್ಗಕ್ಕೆ ಒಯ್ಯುತ್ತದೆ. ಒಬ್ಬ ವ್ಯಕ್ತಿ

ಸತ್ಯ ನುಡಿಯುತ್ತಲೇ ಇದ್ದರೆ ಮತ್ತು ಸತ್ಯಕ್ಕಾಗಿ ಪರಿಶ್ರಮಿಸುತ್ತಲೇ ಇದ್ದರೆ ಅಲ್ಲಾಹನ ಬಳಿ ಅವನನ್ನು ಸತ್ಯಸಂಧನೆಂದು ದಾಖಲಿಸಲಾಗುವುದು. ನೀವು ಸುಳ್ಳಿನ ಬಗ್ಗೆ ಎಚ್ಚರವಾಗಿರಿ. ಏಕೆಂದರೆ ಸುಳ್ಳು ದುಷ್ಟತನಕ್ಕೆ ಮತ್ತು ದುಷ್ಟತನ ನರಕಕ್ಕೆ ಒಯ್ಯುತ್ತದೆ. ಒಬ್ಬ ವ್ಯಕ್ತಿ ಸುಳ್ಳು ನುಡಿಯುತ್ತಲೇ ಇದ್ದರೆ ಮತ್ತು ಸುಳ್ಳಿಗಾಗಿ ಪರಿಶ್ರಮಿಸುತ್ತಲೇ ಇದ್ದರೆ ಅಲ್ಲಾಹನ ಬಳಿ ಅವನನ್ನು ಸುಳ್ಳುಗಾರನೆಂದು ದಾಖಲಿಸಲಾಗುವುದು." (ಮುಸ್ಲಿಂ)

ಅಲ್‌ಹಸನ್ ಬಿನ್ ಅಲೀ ಬಿನ್ ಅಬೀ ತಾಲಿಬ್(ﷺ) ಹೇಳುತ್ತಾರೆ: "ನಿನಗೆ ಯಾವುದರಲ್ಲಿ ಸಂಶಯವಿದೆಯೋ ಅದನ್ನು ಬಿಟ್ಟು ಸಂಶಯವಿಲ್ಲದ್ದನ್ನು ಸ್ವೀಕರಿಸು. ಕಾರಣ, ಸತ್ಯವು ಖಚಿತತೆ ಮತ್ತು ಸಮಾಧಾನವನ್ನು ನೀಡಿದರೆ ಸುಳ್ಳು ಸಂಶಯ ಮತ್ತು ಗೊಂದಲವನ್ನು ಉಂಟುಮಾಡುತ್ತದೆ ಎಂದು ಪ್ರವಾದಿ ಮುಹಮ್ಮದ್(ﷺ) ರು ಹೇಳಿದ್ದು ನನಗೆ ಈಗಲೂ ನೆನಪಿದೆ." (ಅತ್ತಿರ್ಮಿದಿ)

ಅಬೂ ಸುಫ್ಯಾನ್ ಒಂದು ಸುದೀರ್ಘ ಹದೀಸಿನಲ್ಲಿ ಹಿರಾ-ಕ್ಲಿಯಸ್ ಚಕ್ರವರ್ತಿಯೊಡನೆ ನಡೆದ ಸಂಭಾಷಣೆಯನ್ನು ವರದಿ ಮಾಡಿದ್ದಾರೆ. ಅದರಲ್ಲಿ ಹೀಗಿದೆ:

ಹಿರಾಕ್ಲಿಯಸ್: "ಆ ಪ್ರವಾದಿ ನಿಮಗೆ ಏನನ್ನು ಆದೇಶಿ-ಸುತ್ತಾರೆ?"

ಅಬೂ ಸುಫ್ಯಾನ್: "ಅಲ್ಲಾಹನನ್ನು ಮಾತ್ರ ಆರಾ-ಧಿಸಿರಿ. ಅವನೊಡನೆ ಏನನ್ನೂ ಸಹಭಾಗಿಯನ್ನಾಗಿ ಮಾಡಬೇಡಿ. ನಿಮ್ಮ ಪೂರ್ವಜರ ಸಂಪ್ರದಾಯಗಳನ್ನು ತೊರೆಯಿರಿ ಎಂದು ಆದೇಶಿಸುತ್ತಾರೆ. ಅವರು ನಮ್ಮೊಂ-ದಿಗೆ ನಮಾಝ್ ಮಾಡಲು, ಸತ್ಯ ಹೇಳಲು, ಸಭ್ಯರಾಗಿ-ರಲು ಮತ್ತು ಕುಟುಂಬ ಸಂಬಂಧಗಳನ್ನು ಜೋಡಿಸಲು ಆದೇಶಿಸುತ್ತಾರೆ." (ಅಲ್‌ಬುಖಾರಿ ಮತ್ತು ಮುಸ್ಲಿಂ)

ಹಕೀಮ್ ಬಿನ್ ಹಿಝಾಮ್ ರಿಂದ ವರದಿ: ಪ್ರವಾದಿ ಮುಹಮ್ಮದ್(ﷺ) ರು ಹೇಳಿದರು: "ಖರೀದಿದಾರ

ಮತ್ತು ಮಾರಾಟಗಾರನಿಗೆ ಪರಸ್ಪರ ಬೇರ್ಪಡುವ ತನಕ ಅಭಿಪ್ರಾಯ ಬದಲಾಯಿಸುವ ಸ್ವಾತಂತ್ರ್ಯವಿ-ದೆ. ಅವರು ಪ್ರಾಮಾಣಿಕವಾಗಿ ವ್ಯವಹಾರ ಮಾಡಿದರೆ ಅವರ ವ್ಯವಹಾರದಲ್ಲಿ ಸಮೃದ್ಧಿಯುಂಟಾಗುತ್ತದೆ. ಆದರೆ ಅವರು ನ್ಯೂನತೆಗಳನ್ನು ಮರೆಮಾಚಿ ಸುಳ್ಳು ನುಡಿದರೆ ಅವರ ವ್ಯವಹಾರದ ಸಮೃದ್ಧಿ ಹೊರಟುಹೋಗುತ್ತದೆ." (ಅಲ್‌ಬುಖಾರಿ ಮತ್ತು ಮುಸ್ಲಿಂ)

ಅಲ್ಲಾಹನನ್ನು ಪ್ರಾಮಾಣಿಕವಾಗಿ ಆರಾಧಿಸುವ ಮೂಲಕ ಅವನ ವಿಷಯದಲ್ಲಿ ಸತ್ಯವನ್ನು ಪಾಲಿಸುವು-ದು, ಅಲ್ಲಾಹನ ನಿಯಮಗಳಿಗೆ ಬದ್ಧವಾಗಿ ಜೀವಿಸುವ ಮೂಲಕ ಆತ್ಮಸಾಕ್ಷಿಯೊಂದಿಗೆ ಸತ್ಯವನ್ನು ಪಾಲಿಸುವು-ದು, ಮಾತು ಮತ್ತು ವಾಗ್ದಾನಗಳನ್ನು ನೆರವೇರಿಸುವ ಮೂಲಕ ಜನರೊಂದಿಗೆ ಸತ್ಯವನ್ನು ಪಾಲಿಸುವುದು ಇವೆಲ್ಲವೂ ಸತ್ಯವಂತನಾಗುವುದರಲ್ಲಿ ಒಳಪಡುತ್ತದೆ. ಖರೀದಿ ಮತ್ತು ಮಾರಾಟದಲ್ಲಿ ಸತ್ಯ ನುಡಿಯುವುದು,

ವಂಚನೆ, ಮೋಸ ಮಾಡದಿರುವುದು ಕೂಡ ಅದರಲ್ಲಿ ಒಳಪಡುತ್ತದೆ. ಒಬ್ಬ ವ್ಯಕ್ತಿ ಸತ್ಯವಂತನಾಗಬೇಕಾದರೆ ಒಳಗೂ ಹೊರಗೂ ಒಂದೇ ರೀತಿಯಲ್ಲಿರಬೇಕಾದುದು ಅತ್ಯಾವಶ್ಯಕ.

ಸುಳ್ಳು ನುಡಿಯುವುದು ನಿಷಿದ್ಧ. ಸುಳ್ಳು ನುಡಿಯುವುದರಲ್ಲಿ ಅನೇಕ ರೂಪಗಳಿವೆ. ಅತಿ ಕೆಟ್ಟ ರೂಪವು ಅಲ್ಲಾಹು ಮತ್ತು ಅವನ ಪ್ರವಾದಿಯ(ﷺ) ಹೆಸರಲ್ಲಿ ಸುಳ್ಳು ನುಡಿಯುವುದು. ಕಾರಣ, ಇದು ಅಲ್ಲಾಹನ ಧರ್ಮದಲ್ಲಿ ಹಸ್ತಕ್ಷೇಪ ಮಾಡುವುದಾಗಿದೆ. ಇದನ್ನು ಅಲ್ಲಾಹು ಅತಿಯಾಗಿ ದ್ವೇಷಿಸುತ್ತಾನೆ. ಅಲ್ಲಾಹು ಹೇಳುತ್ತಾನೆ: “ಯಾವುದೇ ಜ್ಞಾನವಿಲ್ಲದೆ, ಜನರನ್ನು ದಾರಿತಪ್ಪಿಸುವುದಕ್ಕಾಗಿ ಅಲ್ಲಾಹನ ಹೆಸರಲ್ಲಿ ಸುಳ್ಳು ರಚಿಸಿದವನಿಗಿಂತ ದೊಡ್ಡ ಅಕ್ರಮಿ ಇನ್ನಾರು? ಖಂಡಿತವಾಗಿಯೂ ಅಲ್ಲಾಹು ಅಕ್ರಮಿಗಳನ್ನು ನೇರಮಾರ್ಗಕ್ಕೆ ತರಲಾರ.” (ಕುರ್‌ಆನ್ 6:144)

“ಅಲ್ಲಾಹನ ಹೆಸರಲ್ಲಿ ಸುಳ್ಳು ರಚಿಸಿದವನಿಗಿಂತಲೂ

ದೊಡ್ಡ ಅಕ್ರಮಿ ಇನ್ನಾರು? ಅವರನ್ನು ಅಲ್ಲಾಹನ ಮುಂದೆ ಹಾಜರುಪಡಿಸಲಾಗುವುದು. ಆಗ ಅಲ್ಲಾಹನ ಹೆಸರಲ್ಲಿ ಸುಳ್ಳು ಹೇಳಿದವರು ಇವರೇ ಎಂದು ಸಾಕ್ಷಿಗಳು ಹೇಳುವರು. ಈ ಅಕ್ರಮಿಗಳ ಮೇಲೆ ಅಲ್ಲಾಹನ ಶಾಪ-ವಿರಲಿ." (11:18)

ಇದೇ ರೀತಿ ಪ್ರವಾದಿ ಮುಹಮ್ಮದ್(ﷺ) ರ ಹೆಸರಲ್ಲಿ ಸುಳ್ಳು ಹೇಳುವುದು ಕೂಡ. ಪ್ರವಾದಿ ಮುಹಮ್ಮದ್ (ﷺ) ರು ಹೇಳುತ್ತಾರೆ: "ನನ್ನ ಹೆಸರಲ್ಲಿ ಯಾರಾದರೂ ಉದ್ದೇಶಪೂರ್ವಕ ಸುಳ್ಳು ನುಡಿದರೆ ಅವನು ನರಕದಲ್ಲಿ ತನ್ನ ಆಸನವನ್ನು ಸಿದ್ಧಪಡಿಸಿಕೊಳ್ಳಲಿ." (ಅಲ್‌ಬುಖಾರಿ ಮತ್ತು ಮುಸ್ಲಿಂ)

ಮೂಲನಿಯಮದ ಪ್ರಕಾರ ಸುಳ್ಳು ನುಡಿಯುವುದು ನಿ-ಷಿದ್ಧವಾಗಿದ್ದರೂ ಸಹ ಕೆಲವು ವಿಶೇಷ ಸಂದರ್ಭಗಳಲ್ಲಿ ಸುಳ್ಳು ನುಡಿಯಲು ಇಸ್ಲಾಮ್ ಅನುಮತಿ ನೀಡುತ್ತದೆ. ಉದಾ: ಮುನಿಸಿಕೊಂಡಿರುವ ಇಬ್ಬರ ಮಧ್ಯೆ ಸಂಧಾನ

ಮಾಡಲು ಸುಳ್ಳು ಹೇಳುವುದಲ್ಲದೆ ಬೇರೆ ಮಾರ್ಗವಿಲ್ಲದಿದ್ದರೆ ಸುಳ್ಳು ಹೇಳಿಯಾದರೂ ಅವರ ಮಧ್ಯೆ ಸಂಧಾನ ಮಾಡುವುದು. ಪ್ರವಾದಿ ಮುಹಮ್ಮದ್(ﷺ) ರು ಹೇಳುತ್ತಾರೆ: "ಜನರ ಮಧ್ಯೆ ಸಂಧಾನ ಮಾಡಲು ಉತ್ತಮವಾದುದನ್ನು ಹೇಳುವವನು ಸುಳ್ಳನಲ್ಲ." (ಅಲ್‌ಬುಖಾರಿ)

ಗಂಡ ಹೆಂಡತಿಗೆ ಮತ್ತು ಹೆಂಡತಿ ಗಂಡನಿಗೆ ಅವರ ನಡುವಿನ ಸಂಬಂಧವನ್ನು ಬಲಪಡಿಸಲು ಸುಳ್ಳು ಹೇಳಬಹುದು. ಅದು ಉತ್ಪ್ರೇಕ್ಷೆಯಿಂದ ಕೂಡಿದ ಮಾತಾದರೂ ಸರಿ. ಅಸ್ಮಾ ಬಿಂತ್ ಯಝೀದ್ (ರ) ರಿಂದ ವರದಿ: ಪ್ರವಾದಿ ಮುಹಮ್ಮದ್(ﷺ) ರು ಹೇಳಿದರು: "ಮೂರು ಸಂದರ್ಭಗಳಲ್ಲಿ ಸುಳ್ಳು ಹೇಳುವುದಕ್ಕೆ ಅನುಮತಿಯಿದೆ. ಗಂಡ ಹೆಂಡತಿಯ ಜೊತೆ ಮಾತನಾಡುವಾಗ ಅವಳನ್ನು ಸಂತೋಷಪಡಿಸುವುದಕ್ಕಾಗಿ, ಯುದ್ಧದ ಸಮಯದಲ್ಲಿ ಮತ್ತು ಜನರ ನಡುವೆ ಸಂಧಾನ ಮಾಡುವುದಕ್ಕಾಗಿ." (ಮುಸ್ಲಿಂ)

ವಾಗ್ದಾನ ಮತ್ತು ಕರಾರು ಪಾಲನೆಯ ಸಂದರ್ಭ ಸತ್ಯ ನುಡಿಯುವುದು ಅಥವಾ ಸುಳ್ಳು ಹೇಳುವುದರ ಪರ-ಮೋನ್ನತ ರೂಪ ಜಾಹೀರಾಗುತ್ತದೆ. ವಾಗ್ದಾನ ಮತ್ತು ಕರಾರು ಪಾಲನೆಯ ಸಂದರ್ಭ ಸತ್ಯ ನುಡಿಯುವುದು ವಿಶ್ವಾಸಿಗಳ ಪ್ರಮುಖ ಲಕ್ಷಣವಾಗಿದೆ. ಅವರನ್ನು ಪ್ರಶಂ-ಸಿಸುತ್ತಾ ಅಲ್ಲಾಹು ಹೇಳುತ್ತಾನೆ: "ಮತ್ತು ತಮ್ಮ ವಿಶ್ವಾ-ಸಾರ್ಹತೆ ಹಾಗೂ ವಾಗ್ದಾನಗಳನ್ನು ಕಾಯ್ದುಕೊಳ್ಳುವವ-ರು..." (ಕುರ್‌ಆನ್ 23:8)

"ಅವರೇ ಸತ್ಯವನ್ನು ನುಡಿದವರು. ಅವರೇ ಭಯಭಕ್ತಿ-ಯಿಂದ ಜೀವಿಸುವವರು." (ಕುರ್‌ಆನ್ 2:177)

الحركة النصيحة الإسلامية
ANNASEEHA ISLAMIC MOVEMENT
SURATKAL, MANGALORE - 575 014
MOB: 9731593091 / 9945171612

Jamiyathe Ahle Hadees
Mangalore